# ಮಾತೇ ಜೀವನ ಮಂತ್ರ!

ಎಷ್ಟೋ ಸಂದರ್ಭಗಳಲ್ಲಿ ಒಳ್ಳೆಯ ಮಾತು ಮೈತ್ರಿ ಬೆಸೆಯುತ್ತದೆ. ಹಾಗೇ ಕೆಟ್ಟ ಮಾತು ಶತ್ರುಗಳನ್ನು ಸೃಷ್ಟಿಸಬಹುದು. ಮಾತನಾಡುವುದು ಒಂದು ಕಲೆ. ಇದನ್ನು ಕರಗತ ಮಾಡಿಕೊಳ್ಳುವುದು ಹೇಗೆ?

■ ಯಲ್ದೂರು ಪ್ರಭು


ಮನುಷ್ಯರ ಮಧ್ಯೆ ಪರಸ್ಪರ ಸಂಪರ್ಕವನ್ನು ಕಲ್ಪಿಸುವ ಹಾಗೂ ಪರಸ್ಪರ ಭಾವನೆಗಳನ್ನು ವಿನಿಮಯ ಮಾಡಿಕೊಳ್ಳುವ ಸಾಧನ ಮಾತು. ಮಾತು ಸ್ನೇಹಿತನನ್ನು ಕೊಟ್ಟಂತೆ ಶತ್ರುವನ್ನು ಕೂಡ ಸೃಷ್ಟಿಸುತ್ತದೆ. ಒಂದು ಮಾತು ವಿಜಯ ಶಿಖರಗಳ ಮೇಲೆ ಕೂರಿಸಿದರೆ ಅಧಃಪತನಕ್ಕೂ ಕಾರಣವಾಗುತ್ತದೆ. ಮಾತಿನಿಂದಲೇ ಮಾನವನ ಬಾಳು ಹೆಣೆದುಕೊಂಡಿದೆ.

ನಮ್ಮ ಸುತ್ತಮುತ್ತಲ ಇರುವ ಇತರರೊಂದಿಗೆ ಮಾನವ ಸಂಬಂಧಗಳನ್ನು ಬಲಪಡಿಸುವುದು ಮಾತು. ಅದೇ ಮಾತು ಬಲವಾದ ಸಂಬಂಧವನ್ನು ಬಲಹೀನ ಮಾಡಬಲ್ಲದು. ಇದು ಮಾತಿಗಿರುವ ಶಕ್ತಿ! 'ಬಾಯಿ ಒಳ್ಳೆಯದಾದರೆ ಊರು ಒಳ್ಳೆಯದು' ಎಂಬ ಮಾತಿದೆ. ಮಾತಿಲ್ಲದೇ ಜೀವನವೇ ಇಲ್ಲ, ಮಾತೇ ಜೀವನದ ಜೀವಾಳ. ನಮಗೆ ಎಷ್ಟು ಒಳ್ಳೆಯ ಆಲೋಚನೆಗಳು ಇದ್ದಾಗ್ಯೂ ಅವುಗಳನ್ನು ಸದ್ಭಾವನೆಯಿಂದ ಒಳ್ಳೆಯ ನುಡಿಗಳನ್ನು ವ್ಯಕ್ತಪಡಿಸದೇ ಹೋದರೆ ಆ ಆಲೋಚನೆಗಳೇ ವ್ಯರ್ಥವಾಗುತ್ತವೆ.

## ಮಾತಾಡುವುದು ಒಂದು ಕಲೆ

ಮಾತನ್ನು ಸರಿಯಾಗಿ ಉಪಯೋಗಿಸಿಕೊಂಡರೆ ಎಷ್ಟೋ ವಿಜಯದ ಶಿಖರಗಳನ್ನು ಏರಬಹುದು. ಸ್ನೇಹವನ್ನು ಬೆಳೆಸಿಕೊಳ್ಳಬಹುದು. ಮಾನವೀಯ ಸಂಬಂಧಗಳನ್ನು ಬೆಳೆಸಿಕೊಳ್ಳುವುದರಲ್ಲಿ ಮಾತು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ. ಯಾವುದೇ ಯಶಸ್ವಿ ವ್ಯಕ್ತಿತ್ವವನ್ನು ಅವಲೋಕಿಸಿದಾಗ ಅವರ ಯಶಸ್ಸಿಗೆ ಅವರ ಮಾತುಗಳೇ ಕಾರಣ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಉದಾಹರಣೆಗೆ: ಬಸವಣ್ಣ, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಗಾಂಧೀಜಿ, ನೆಹರು, ಅಬ್ದುಲ್ ಕಲಾಂ.. ಇದರಿಂದ ಮಾತಿಗೆ ಎಂತಹ ಶಕ್ತಿ ಇದೆ ಎಂಬುದು ತಿಳಿಯುತ್ತದೆ. ರಾಜಕಾರಣಿ, ವ್ಯಾಪಾರಿ, ಬುದ್ಧಿಜೀವಿ ಮತ್ತಿತರರು ಕೂಡ ವಾಕ್ಚಾತುರ್ಯದ ಮಹತ್ವವನ್ನು ಅರಿತವರೇ. ಅದರಿಂದಲೇ ಖ್ಯಾತಿ ಹೊಂದಿದವರು ಕೂಡ. ಯಾವುದೇ ವಿಶೇಷ ಅರ್ಹತೆ, ಕೌಶಲ ಇಲ್ಲದಿದ್ದರೂ ಕೇವಲ ಬುದ್ಧಿವಂತಿಕೆಯ ಮಾತುಗಳಿಂದಲೇ ಯಶಸ್ವಿಯಾದವರೂ ಇದ್ದಾರೆ. ಮಾತು ಮನುಷ್ಯನ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತೆ. ನಮ್ಮ ಆಲೋಚನೆಗಳನ್ನು ಅನಾವರಣಗೊಳಿಸುವ ಸಾಧನ. ಒಳ್ಳೆಯ ವಾಕ್‌ಚಾತುರ್ಯ ಇರುವವರು ಇತರರ ಆಲೋಚನೆಗಳನ್ನು ತಮಗೆ ಅನುಕೂಲಕರವಾಗುವಂತೆ ಮಾರ್ಪಡಿಸಿಕೊಳ್ಳುತ್ತಾರೆ. ಚೆನ್ನಾಗಿ ಮಾತಾಡುವವರು ಬಹುತೇಕರನ್ನು ಆಕರ್ಷಿಸುತ್ತಾರೆ. ಪ್ರತಿಯೊಬ್ಬರಲ್ಲೂ ಈ ಕಲೆ ಇರುತ್ತದೆ.

ನಮ್ಮ ಮಾತನ್ನು ಸರಿಯಾಗಿ ವ್ಯಕ್ತಪಡಿಸಿದ್ದೇ ಆದರೆ ಅದು ಇತರರ ಮೇಲೆ ಪರಿಣಾಮಕಾರಿ ಪ್ರಭಾವವನ್ನು ಬೀರುತ್ತದೆ. ಇದರಿಂದ ಮಾನವೀಯ ಸಂಬಂಧಗಳೂ ಬೆಳೆಯುತ್ತವೆ. 'ಸೌಹಾರ್ದ ಸಂಭಾಷಣೆ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ' ಎನ್ನುವುದು ವ್ಯಕ್ತಿತ್ವ ವಿಕಾಸ ನಿಪುಣರ ಅಭಿಪ್ರಾಯ. ಈ ಪ್ರತಿಭೆ ಅಂಥ ಕಠಿಣವಾದ ಸಾಧನೆಯೇನಲ್ಲ! ಆಡುವ ಮಾತುಗಳಲ್ಲಿ, ವಿಧಾನದಲ್ಲಿ ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳುವುದರಿಂದ ಇದು ಸಾಧ್ಯವಾಗಬಹುದು ಅಷ್ಟೇ.



ಅಬ್ದುಲ್ ಕಲಾಂ

## ಮಧುರವಾಗಿ ಮಾತಾಡಿ

ಮಾತು ಕೇಳುವವರಿಗೆ ಮಧುರವಾಗಿರಬೇಕು. ಚಿಕ್ಕವರಾಗಿರಲಿ, ಹಿರಿಯವರಾಗಿರಲಿ ಸಂಬೋಧನೆಯಲ್ಲಿ ಗೌರವ ಇರಬೇಕು. ನಾವು ಹೇಳಬೇಕಾಗಿರುವ ವಿಷಯವನ್ನು ನೇರವಾಗಿ ತಿಳಿಸಿಬಿಡಬೇಕು. ಸುತ್ತಿ ಬಳಸಿ, ಕೊಂಕು ಕೊಂಕಾಗಿ ಮಾತಾಡುವವರನ್ನು ಯಾರೂ ಇಷ್ಟಪಡುವುದಿಲ್ಲ. ನಮ್ಮ ಭಾವನೆಯು ಸ್ಪಷ್ಟವಾಗಿದ್ದಾಗ ನಮ್ಮ ಎದುರಿನವರ ಊಹಾಪೋಹಗಳು ತೊಲಗಿ ಹೋಗುತ್ತವೆ. ಮಾತಾಡುವಾಗ ತುಟಿಗಳ ಮೇಲೆ ಕಿರುನಗೆ ಲಾಸ್ಯವಾಡಲಿ. ನಗುತ್ತಾ ನಗುತ್ತಾ ಮಾತಾಡುವವರು ಬಹಳ ಜನರನ್ನು ಆಕರ್ಷಿಸುತ್ತಾರೆ. ಅವರು ತಮ್ಮ ಸುತ್ತಲೂ ಇರುವ ಪರಿಸರವನ್ನು ಉಲ್ಲಾಸವಾಗಿ ಇರಿಸುತ್ತಾರೆ.

ಮಾತುಗಳಲ್ಲಿ ಯಾರನ್ನೂ ನೋಯಿಸಬೇಡಿ. ಎದುರಿನವರ ಮೇಲೆ ವ್ಯಂಗ್ಯ ಬಾಣಗಳನ್ನು ಪ್ರಯೋಗಿಸುವುದು ಸಮಂಜಸವಲ್ಲ. ಅಂತಹ ಮಾತುಗಳಿಗೆ